**<u>ದಿನಾಂಕಃ16.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ಶ್ರೀ. ಸಿ ಕೆ ವಕೀಲರಿಂದಃ-</u>**

1. ನಾನು ಬಿ ಎ ಅನುತ್ತೀರ್ಣ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದರೆ ಸಾಕ್ಷಿ ನಾನೇ ಹೇಳಿ ಬರೆಸಿದ್ದೇನೆ ಎನ್ನುತ್ತಾರೆ. ಈ ದಾವೆಯನ್ನು ಯಾರು ಯಾರ ವಿರುದ್ದ ಏನು ಬೇಡಿ ತಂದಿರುತ್ತಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ. ದಾವಾ ಸ್ವತ್ತುಗಳಲ್ಲಿ ಯಾವುದೇ ಜಾತ್ರೆ ಮತ್ತು ಬೆಂಕಿ ಕೊಂಡ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಪೂರ್ವ ಪಶ್ಚಿಮಗಳ ಕಡೆ ಇರುವ ಲಕ್ಷ್ಮಿ ದೇವಸ್ಥಾನ ಕಟ್ಟಿ ಎಷ್ಟು ವರ್ಷ ಆಗಿದೆ ಎಂದರೆ ಸಾಕ್ಷಿಯು ಪ್ರಾಚೀನ ಕಾಲದ್ದು ಎಷ್ಟು ವರ್ಷ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ ಎನ್ನುತ್ತಾರೆ. ದೇವಸ್ಥಾನದ ಜಾಗವನ್ನು ನಾನು ನೋಡಿದ್ದೇನೆ.

2. ದೇವಸ್ಥಾನದ ಮುಂದೆ ಇರುವ ಖಾಲಿ ಜಾಗದಲ್ಲಿ ಕಾಂಕ್ರೀಟ್ ಆಗಿದೆ ಎಂದರೆ ಸರಿ, ಅದರ ಮುಂದೆ ರಸ್ತೆ ಇದೆ ಎಂದರೆ ಸರಿ. ದೇವಸ್ಥಾನದ ಬೆಂಕಿ ಕೊಂಡ ಮಾಡಬೇಕಾದರೆ ಕಾಂಕ್ರೀಟ್ ಗುಂಡಿ ತೆಗೆಯಬೇಕು ಎಂದರೆ ಸಾಕ್ಷಿ ಅಲ್ಲಿ ಮಾಡುವುದಿಲ್ಲ ಬೇರೆ ಕಡೆ ಮಾಡುತ್ತಾರೆ ಎನ್ನುತ್ತಾರೆ. ದೇವಸ್ಥಾನದ ಮುಂದೆ ಯಾವುದೇ ಬೆಂಕಿ ಕೊಂಡ ಕಾರ್ಯಕ್ರಮ ಮಾಡುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಬೆಂಕಿ ಕೊಂಡಕ್ಕೆ ಸಂಬಂಧಿಸಿದ ಕಾರ್ಯಕ್ರಮ ನಡುಸುತ್ತೇವೆ ಎನ್ನುತಾರೆ. ಬೆಂಕಿ ಕೊಂಡ ಕಾರ್ಯಕ್ರಮ ಲಕ್ಷ್ಮಿ ದೇವಸ್ಥಾನದಿಂದ ಬಹಳ ದೂರದಲ್ಲಿರುವ ಮಾರಮ್ಮ ದೇವಸ್ಥಾನದ ಬಳಿ ಮಾಡುತ್ತೇವೆ ಎಂದರೆ ಸರಿ. ದಾವಾ ಆಸ್ತಿಗಳ ಸಂಬಂಧ ತಾವು ದಾಖಲೆಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ ಎನ್ನುತ್ತಾರೆ.

3. ದಾವಾ ಆಸ್ತಿಗಳು ಲಕ್ಷ್ಮಿ ದೇವಸ್ಥಾನಕ್ಕೆ ಸೇರಿದ ಆಸ್ತಿಗಳೆಂದು ತೋರಿಸಲು ತಾವು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಾನು ಹಾಜರು ಮಾಡಿಲ್ಲ ಪ್ರತಿವಾದಿಗಳು ಹಾಜರುಪಡಿಸಿದ್ದಾರೆ ಎನ್ನುತ್ತಾರೆ. ದಾವಾ ಆಸ್ತಿಗಳು ವಾದಿಯ ತಂದೆಯ ಹೆಸರಿಗೆ ಖಾತೆ ಇದೆ ಎಂದರೆ ಸಾಕ್ಷಿಯು ಇರಬಹುದು ಆದರೆ ಪೂರ್ವ ಕಾಲದಿಂದಲೂ ಆ ಜಾಗದಲ್ಲಿ ಲಕ್ಷ್ಮಿ ದೇವಸ್ಥಾನ ಕಾರ್ಯಕ್ರಮಗಳು ಮತ್ತು ಲಕ್ಷ್ಮಿ ದೇವಸ್ಥಾನಕ್ಕೆ ಜಾಗವನ್ನು ಬಳಸುತ್ತಾ ಬಂದಿದ್ದಾರೆ ಎನ್ನುತ್ತಾರೆ. ದಾವಾ ಸ್ವತ್ತುಗಳನ್ನು ಲಕ್ಷ್ಮಿ ದೇವರ ಯಾವುದೇ ಕಾರ್ಯಕ್ರಮಕ್ಕೆ ಉಪಯೋಗಿಸಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳ ಬಗ್ಗೆ ಸಂಪೂರ್ಣ ಯಾವುದೇ ಮಾಹಿತಿ ಇಲ್ಲದಿದ್ದರೂ ಪ್ರತಿವಾದಿಗಳ ಮಾತು ಕೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ